**ಇಂದು ದಿನಾಂಕ:18.06.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :1, 4 ಮತ್ತು 6 ನೇ ಪ್ರತಿವಾದಿ ಪರ ಶ್ರೀ.ಕೆ.ಬಿ.ಎಸ್.ವಕೀಲರಿಂದಃ**

ಈ ಕೇಸು ಯಾಕೇ ಹಾಕಿದ್ದೀರ ಅಂತ ತಿಳಿದುಕೊಂಡಿದ್ದೇನೆ. ನನ್ನ ತಂದೆ ಹೆಸರು ಬ್ರಹ್ಮಸೂರಯ್ಯ. ನನ್ನ ತಂದೆ ತೀರಿಕೊಂಡು ಸುಮಾರು 30 ವರ್ಷವಾಗಿದೆ. ಅವರು ತೀರಿಕೊಳ್ಳುವಾಗ ನನಗೆ 10-15 ವರ್ಷವಾಗಿತ್ತು. ದಾವಾ ಆಸ್ತಿಗಳನ್ನು ನನ್ನ ತಂದೆ ಸ್ವಯಾರ್ಜ್ರಿತವಾಗಿ ಸಂಪಾದಿಸಿದ್ದರು ಎಂದು ತೋರಿಸಲು ದಾಖಲೆ ಇದೆಯೇ ಎಂದು ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡ 20 ವರ್ಷದ ನಂತರ ನನ್ನ ಮದುವೆ ಆಯಿತು. ನನ್ನ ಮದುವೆ ಖರ್ಚು ವೆಚ್ಚಗಳನ್ನು ನನ್ನ ಅಣ್ಣ ತಮ್ಮಂದಿರು ಯಾರು ಭರಿಸಿಲ್ಲ ನನ್ನ ಯಜಮಾನರೇ ಖರ್ಚು ಮಾಡಿದ್ದಾರೆ. ನನ್ನ ಗಂಡ ಸಹೋದರಿಯೇ 4 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. 4 ನೇ ಪ್ರತಿವಾದಿ ನನ್ನ ಗಂಡನ ವಿರುದ್ಧ ಆಸ್ತಿ ವಿಭಾಗಕ್ಕಾಗಿ ನಂಜನಗೂಡು ನ್ಯಾಯಾಲಯದಲ್ಲಿ ಕೇಸು ಹಾಕಿದ್ದಾರೆ ಎಂದರೆ ಸರಿ. ಯಾವ ದಿನಾಂಕದಂದು ನಮ್ಮ ಅಣ್ಣನನ್ನು ಭಾಗಾಂಶ ಕೇಳಿದ್ದೇನೆ ಎಂದು ನೆನಪಿಲ್ಲ. ನನ್ನ ಮದುವೆ ಖರ್ಚು ವೆಚ್ಚವನ್ನು 4 ನೇ ಪ್ರತಿವಾದಿಯೇ ಮಾಡಿದ್ದಾರೆಯೇ ವಿನಹ ನನ್ನ ಯಜಮಾನರೇ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಯಾವುದೇ ಭಾಗಾಂಶ ಕೊಡಬೇಕಾಗಿಲ್ಲದಿದ್ದರು ನನ್ನ ಗಂಡನ ಮಾತು ಕೇಳಿ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಕುರುಕುಳ ಕೊಡಬೇಕು ಎಂದು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವುದೆಲ್ಲ ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದುವ ಕಾಲಕ್ಕೆ 4 ನೇ ಪ್ರತಿವಾದಿಗೆ ಎಷ್ಟು ವರ್ಷ ವಯಸ್ಸು ಆಗಿತ್ತು ಎಂದು ಗೊತ್ತಿಲ್ಲ. ನಮ್ಮ ತಂದೆ ಮರಣ ಹೊಂದಿದಾಗ ನನ್ನ ತಾಯಿ ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲ. ದಾವಾ ಆಸ್ತಿಗಳು ನಮ್ಮ ತಂದೆಗೆ ಹೇಗೆ ಬಂದಿತ್ತು ಅಂತ ನಿಖರವಾಗಿ ಗೊತ್ತಿಲ್ಲ. ನನ್ನ ತಂದೆ ಮರಣ ಹೊಂದುವ ಕಾಲಕ್ಕೆ ಪ್ರತಿವಾದಿ 1, 4 ಮತ್ತು 6 ರವರು ಪ್ರತ್ಯೇಕವಾಗಿ ಸಂಪಾದನೆ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ.

ಅವರ ಸಂಪಾದನೆಯಿಂದಲ್ಲೇ ದಾವಾ ಸ್ವತ್ತುಗಳನ್ನು ಖರೀದಿಸಿಲಾಗಿದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅವರ ಚಿಕ್ಕವರು ಆಗಿದ್ದರು. ನ್ಯಾಯಾಲಯಕ್ಕೆ ನಾನು ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೇ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**